ಪಶು ಆಸ್ಪತ್ರೆ ಮತ್ತು ವೈದ್ಯಕೀಯ ಸಲಕರಣೆಗಳು

105(1241); ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ)

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಕಾಲುಬಾಯಿ ರೋಗ ನಿಯಂತ್ರಣದಲ್ಲಿದೆಯೇ; ಈ ರೋಗ ತಗುಲಿದ ರಾಸುಗಳು ಎಷ್ಟು; ಇದುವರೆವಿಗೂ ಕಾಲುಬಾಯಿ ರೋಗದಿಂದ ಮೃತಪಟ್ಟ ರಾಸುಗಳು ಎಷ್ಟು; ಮೃತಪಟ್ಟ ರಾಸುಗಳಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ;

ಆ) ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಹೊಸದಾಗಿ ಪಶು ಆಸ್ಪತ್ರೆ ಮಂಜೂರು ಮಾಡಲಾಗುವುದೇ; ಹಾಗಿದ್ದಲ್ಲಿ, ಯಾವ ಗ್ರಾಮದಲ್ಲಿ ಮಾಡಲಾಗುವುದು;

ಇ) ಈ ಕ್ಷೇತ್ರ ವ್ಯಾಪ್ತಿಯ ಪಶು ಆಸ್ಪತ್ರೆ/ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಸಾಕಷ್ಟು ವೈದ್ಯಕೀಯ ಸಲಕರಣೆ/ ಔಷಧಗಳು ಲಭ್ಯವಿದೆಯೇ; ಹಾಗಿದ್ದಲ್ಲಿ, ಔಷಧಿಗಳ ಪೂರೈಕೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು)

ಅ) ದೇವನಹಳ್ಳಿ ತಾಲ್ಲೂಕಿನಲ್ಲಿ ಕಾಲುಬಾಯಿ ರೋಗ ನಿಯಂತ್ರಣದಲ್ಲಿದೆ. ದಿ:1-9-2013 ರಿಂದ 20-12-2013ರ ವರೆಗೆ ದೇವನಹಳ್ಳಿ ತಾಲ್ಲೂಕಿನಲ್ಲಿ 285 ಜಾನುವಾರುಗಗಳಿಗೆ ಕಾಲುಬಾಯಿ ರೋಗ ತಗುಲಿದ್ದು, ಇವುಗಳಲ್ಲಿ 51 ರಾಸುಗಳು ಮೃತಪಟ್ಟಿರುತ್ತವೆ. ಇವುಗಳಲ್ಲಿ ಎರಡು ರಾಸುಗಳಿಗೆ ವಿಮೆ ಇದ್ದು, ಪರಿಹಾರ ದೊರೆತಿದ್ದು ಉಳಿದ 49 ರಾಸುಗಳಲ್ಲಿ 46 ರಾಸುಗಳು ಮಾಲೀಕರಿಗೆ ಪರಿಹಾರ ನೀಡಲಾಗಿದೆ.

ಬಾಕಿ 3 ರಾಸುಗಳು ಮಾಲೀಕರಿಗೆ ಕೂಡಲೇ ಪರಿಹಾರ ನೀಡಲಾಗುವುದು.

ಆ) 2007ರ ಜಾನುವಾರು ಗಣತಿಯಂತೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 90764 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯ ಸಂಸ್ಥೆ ಕಾರ್ಯನಿರ್ವಹಿಸಬೇಕಾಗಿದ್ದು, ಅದರಂತೆ 18 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆಯಿದ್ದು, ಪ್ರಸ್ತುತ 26 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದುದರಿಂದ, ಹೊಸದಾಗಿ ಪಶುಆಸ್ಪತ್ರೆ ಮಂಜೂರು ಮಾಡುವ ಅವಶ್ಯಕತೆ ಕಂಡುಬರುತ್ತಿಲ್ಲ.

ಇ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ರಾಜ್ಯವಲಯ ಹಾಗೂ ಜಿಲ್ಲಾವಲಯದ ಅಡಿಯಲ್ಲಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಔಷಧಿ ಹಾಗೂ ವೈದ್ಯಕೀಯ ಸಲಕರಣೆಗಳನ್ನು ಖರೀದಿಸಿ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಕ್ಕೆ ಒಂದು ಘಟಕದಂತೆ, ಪಶು ಚಿಕಿತ್ಸಾಲಯಗಳಿಗೆ ಎರಡು ಘಟಕಗಳಂತೆ, ಪಶು ಆಸ್ಪತ್ರೆಗಳಿಗೆ ಮೂರು ಘಟಕಗಳಂತೆ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಳನ್ನು ವಿತರಣೆ ಮಾಡಲಾಗುತ್ತಿದೆ. ಹೆಚ್ಚುವರಿ ಬೇಡಿಕೆ ಬಂದಲ್ಲಿ ಹೆಚ್ಚುವರಿ ಅನುದಾನ ಒದಗಿಸಿ ಸರಬರಾಜು ಮಾಡಲು ಕ್ರಮವಹಿಸಲಾಗುವುದು.

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ದೇವನಹಳ್ಳಿ ತಾಲ್ಲೂಕಿನಲ್ಲಿ ಸುಮಾರು 168 MPC Societies ಇವೆ, ಲಕ್ಷಾಂತರ ಜಾನುವಾರುಗಳಿವೆ, ಅಲ್ಲಿ ಅತಿ ಹೆಚ್ಚಿನ ಜಾನುವಾರುಗಳಿರುವುದು, ರೇಷ್ಮೆ ಮತ್ತು ಹಾಲಿನಿಂದ ನಮ್ಮ ತಾಲ್ಲೂಕಿನ ಬಹುತೇಕ ರೈತರು ಜೀವನ ಮಾಡುತ್ತಿದ್ದಾರೆ. ಅತಿ ಹೆಚ್ಚು ಜಾನುವಾರುಗಳಿರುವ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಮತ್ತು ಪಶುವೈದ್ಯ ಶಾಲೆಗಳ ಹಾಗೂ ವೈದ್ಯರ

ಕೊರತೆ ಇದೆ, ಇದನ್ನು ಬಗೆಹರಿಸಬೇಕೆಂದು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರ ಖಂಡಿತವಾಗಿಯೂ ಆ ದಿಸೆಯಲ್ಲಿ ಯೋಚನೆ ಮಾಡುತ್ತದೆ. ಆದರೆ ನಿಮ್ಮ ಅವಶ್ಯಕತೆಗಿಂತಲೂ ಹೆಚ್ಚು ಆಸ್ಪತ್ರೆಗಳು ನಿಮ್ಮ ತಾಲ್ಲೂಕಿನಲ್ಲಿದೆ. ಆದರೆ ಮೂಲವಾಗಿ ಬೇಕಾಗಿರುವುದು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದು ಬಹಳ ಅವಶ್ಯಕತೆ ಇದೆ. ಏಕೆಂದರೆ, ನಿಮ್ಮಲ್ಲಿ ಸಿಗುವ ಹೈಬ್ರಿಡ್ ತಳಿಗಳಿಗೆ ಹೆಚ್ಚು ಸಹಾಯವಾಗಬೇಕೆನ್ನುವುದಾದರೆ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು ಅವಶ್ಯಕತೆ ಇದೆ. ಅದನ್ನು ಖಂಡಿತವಾಗಿಯೂ ಪರಿಶೀಲನೆ ಮಾಡಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸತಕ್ಕಂಥ ಕೆಲಸವನ್ನು ಈ ಸಾರಿಯೇ ಮಾಡುತ್ತೇವೆ.

ಅಧ್ಯಕ್ಷರು: ಮುಕಬುಲ್ ಎಸ್.ಬಾಗವಾನ್, ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ, ಹೆಚ್.ಡಿ.ರೇವಣ್ಣ ಇಲ್ಲ, ಹೆಚ್.ಪಿ.ರಾಜೇಶ್ ರವರೆ, ನಿಮ್ಮ ಪ್ರಶ್ನೆ ಬೇರೆಯವರಿಗೆ ವರ್ಗವಾಗಿದೆ. ಈಗ ಪ್ರಶ್ನೋತ್ತರ ಮುಗಿದಿದೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]: ದಿ: 18.2.2014ರ ಏಳನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 151 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ, ಇನ್ನು ಅರ್ಜಿಗಳನ್ನೊಪ್ಪಿಸುವುದು.

(ಅನುಬಂಧ–I)